# ಜಣ ಗಣತಿಗೆ ಸುದರ್ಶನ್ ಪಟ್ನಾಯಕ್ ರಾಯಭಾರಿ

■ ರಾಘವೇಂದ್ರ ಕೆ. ತೊಗರ್ಸಿ




ಏಪ್ರಿಲ್ 1ರಿಂದ ಜನ ಗಣತಿ ಆರಂಭವಾಗಿದೆ. ಸಣ್ಣಪುಟ್ಟ ಜಾತಿ, ಸಮುದಾಯ, ಬುಡಕಟ್ಟುಗಳ ನಿಖರವಾದ ದತ್ತಾಂಶವು ರಾಷ್ಟ್ರೀಯ ಮಾಹಿತಿ ಸಂಪನ್ಮೂಲವನ್ನು ರೂಪಿಸಲಿದೆ. ಇಂತಹ ಮಹತ್ವಾಕಾಂಕ್ಷೆಯ ಕೆಲಸದ ರಾಯಭಾರಿಯಾಗಿ ವಿಶ್ವಪ್ರಸಿದ್ಧ ಮರಳು ಶಿಲ್ಪಿ ಸುದರ್ಶನ್ ಪಟ್ನಾಯಕ್ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಮೊದಲ ಬಾರಿ ಆಧುನಿಕ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿ ಮಾಡುತ್ತಿರುವ ಗಣತಿಯಿಂದ ಸರ್ಕಾರದ ಹೊಸ ಯೋಜನೆ, ನೀತಿ ನಿರೂಪಣೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ನೆರವಾಗಲಿದೆ ಎಂದು ಅಂದಾಜಿಸಲಾಗಿದೆ.



ಪದ್ಮಶ್ರೀ ಪುರಸ್ಕೃತ ಕಲಾವಿದ ಸುದರ್ಶನ್ ಗಣತಿ ಕಾರ್ಯದ ಮಹತ್ವವನ್ನು ಜನಸಾಮಾನ್ಯರಿಗೆ ತಲುಪಿಸುವ ಸಂಬಂಧ ಅವರನ್ನು ಸರ್ಕಾರ ನೇಮಕ ಮಾಡಿದೆ. ಒಡಿಶಾ ಮೂಲದ ಪಟ್ನಾಯಕ್ ತಮ್ಮ ಮರಳು ಕಲೆಯಿಂದ ವಿಶ್ವ ಪ್ರಸಿದ್ಧಿಯನ್ನು ಗಳಿಸಿದ್ದಾರೆ. ಅವರು ಅನೇಕ ಜನಜಾಗೃತಿ ಆಂದೋಲನಕ್ಕೆ ತಮ್ಮ ಕಲಾ ಕೌಶಲ್ಯವನ್ನು ಬಳಸಿದ್ದಾರೆ. ಕ್ರೀಡೆ, ಅಂತರರಾಷ್ಟ್ರೀಯ ಕಾರ್ಯಕ್ರಮಗಳು, ಶಾಂತಿ–ಸೌಹಾರ್ದತೆ ಮತ್ತು ಸಮಾಜಮುಖಿ ಚಿಂತನೆ, ಪರಿಸರ ಜಾಗೃತಿ, ಆರೋಗ್ಯ ಹೀಗೆ ಹತ್ತು ಹಲವು ಕಾರ್ಯಕ್ರಮಗಳ ಕುರಿತು ಅವರು ಕಲೆಯ ಮೂಲಕ ಅಭಿವ್ಯಕ್ತಿಸಿದ್ದಾರೆ. ಅವರ ಕಲೆಯನ್ನು ಲಕ್ಷಾಂತರ ಮಂದಿ ವೀಕ್ಷಿಸುತ್ತಾರೆ ಎನ್ನುವುದು ಅವರ ಜನಪ್ರಿಯತೆಯ ಪ್ರತೀಕ. ಅವರ ಕಲೆಯನ್ನು ಪರಿಗಣಿಸಿ ಭಾರತ ಸರ್ಕಾರ 2014ರಲ್ಲಿ ಪದ್ಮಶ್ರೀ ಪುರಸ್ಕಾರವನ್ನು ನೀಡಿ ಗೌರವಿಸಿದೆ.

ಪ್ರತಿ ಹತ್ತು ವರ್ಷಗಳಿಗೆ ಜನಗಣತಿಯನ್ನು ಮಾತ್ರ ಮಾಡಲಾಗುತ್ತಿತ್ತು. ಹಿಂದೆ 2011ರಲ್ಲಿ ನಡೆದ ಗಣತಿಯೇ ಕೊನೆಯದು. ಇದನ್ನು ಕೇಂದ್ರ ಗೃಹ ಇಲಾಖೆ ನಡೆಸುತ್ತದೆ. 2019ರ ಕೋವಿಡ್ ಸಾಂಕ್ರಾಮಿಕ ರೋಗ ಉಂಟುಮಾಡಿದ ದುಷ್ಪರಿಣಾಮದ ಕಾರಣಕ್ಕೆ 2021ರಲ್ಲಿ ನಡೆಸಬೇಕಿದ್ದ ಉದ್ದೇಶಿತ ಗಣತಿ ಕಾರ್ಯವನ್ನು ನೆರವೇರಿಸಲು ಸಾಧ್ಯವಾಗಲಿಲ್ಲ. ಈಗ ಮೊದಲ ಬಾರಿಗೆ ಡಿಜಿಟಲ್ ಜನ ಗಣತಿಯನ್ನು ಮಾಡಲಾಗುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜಾತಿ ಗಣತಿಯನ್ನೂ ಮಾಡುತ್ತಿರುವುದು ವಿಶೇಷ. ಬ್ರಿಟಿಷ್ ಸರ್ಕಾರ 1931ರಲ್ಲಿ ಮೊದಲ ಬಾರಿಗೆ ಜಾತಿ ಗಣತಿಯನ್ನು ಮಾಡಿತ್ತು. ಆ ನಂತರ ಈ ಗಣತಿ ಮಹತ್ವದ ಮೈಲುಗಲ್ಲನ್ನು ನಿರ್ಮಿಸಲಿದೆ.

'ಡಿಜಿಟಲ್ ಜನಗಣತಿ 27' ಮೊಬೈಲ್ ಆ್ಯಪ್ ಆಧಾರಿತವಾಗಿದೆ. ತಂತ್ರಜ್ಞಾನ ಬಳಕೆದಾರ ಸ್ನೇಹಿಯಾಗಿದೆ. ನಾಗರಿಕರು ಸ್ವತ ತಾವೇ ತಮ್ಮ ದಾಖಲೆಯನ್ನು ನೀಡಿ ಸ್ವಯಂ ಅಪ್‌ಲೋಡ್ ಮಾಡಲು ಅವಕಾಶವನ್ನು ನೀಡಲಾಗಿದೆ. ಕನ್ನಡ ಸೇರಿದಂತೆ 16 ಪ್ರಾದೇಶಿಕ ಭಾಷೆಗಳಲ್ಲಿ ಪ್ರಶ್ನಾವಳಿಯನ್ನು ಈ ಆ್ಯಪ್ ಒಳಗೊಂಡಿದೆ. ತಾವು ಆಯ್ಕೆ ಮಾಡಿಕೊಂಡ ಭಾಷೆಯಲ್ಲಿಯೇ ನಾಗರಿಕರು ಮಾಹಿತಿಯನ್ನು ನೀಡಲು ಅನುಕೂಲವಾಗುವಂತೆ ಇದನ್ನು ಅಭಿವೃದ್ಧಿಪಡಿಸಿದ್ದಾರೆ. ದೇಶದ ಅಭಿವೃದ್ಧಿಗೆ ಹೊಸ ಯೋಜನೆಗಳನ್ನು ರೂಪಿಸಲು ನಾಗರಿಕರ ಪಾತ್ರ ದೊಡ್ಡದು. ಈ ಗಣತಿ ಕಾರ್ಯದಲ್ಲಿ ದೇಶವಾಸಿಗಳು ಭಾಗವಹಿಸಬೇಕು ಎನ್ನುವ ಪ್ರಚಾರಾಂದೋಲನವನ್ನು ಕಲಾವಿದ ಪಟ್ನಾಯಕ್ ಮಾಡಲಿದ್ದಾರೆ. ಜಾತಿ, ಜನಸಂಖ್ಯೆ, ಭಾಷೆ, ಶಿಕ್ಷಣ, ಆರ್ಥಿಕ ಸ್ಥಿತಿ, ವಸತಿ, ಲಿಂಗ ಅಲ್ಲದೆ ಮೂಲ ಸೌಲಭ್ಯದ ನಿಖರ ವಿವರ ಗಣತಿಯಿಂದ ಹೊರಬರಲಿದೆ ಎಂಬ ನಿರೀಕ್ಷೆಯಿದೆ.

ಸಾಮಾಜಿಕ ಜನಜಾಗೃತಿ ಕಾರ್ಯದಿಂದಲೇ ಹೆಸರುವಾಸಿ ಆಗಿರುವ ಸುದರ್ಶನ್ ಪಟ್ನಾಯಕ್ 2017ರಲ್ಲಿ ಪುರಿ ಕಡಲ ಕಿನಾರೆಯಲ್ಲಿ 48.8 ಅಡಿ ಎತ್ತರದ ಮರಳ ಕಲಾಕೃತಿ ರಚಿಸಿ ಗಿನ್ನಿಸ್ ವಿಶ್ವ ದಾಖಲೆಯನ್ನು ನಿರ್ಮಿಸಿದ್ದರು. ಹವಾಮಾನ ವೈಪರೀತ್ಯ, ಕೋವಿಡ್–19 ಸೇರಿದಂತೆ ಜ್ವಲಂತ ಸಮಸ್ಯೆಗಳಿಗೆ ಸಂವೇದನಾಶೀಲ ಕೃತಿಗಳನ್ನು ರಚಿಸುವುದು ಅವರ ಹೆಗ್ಗಳಿಕೆ.

ಗಣತಿ ಪ್ರಕ್ರಿಯೆಯಲ್ಲಿ ನಾಗರಿಕರು ಐಚ್ಛಿಕವಾಗಿ ಭಾಗವಹಿಸುವ ಅವಕಾಶ ನೀಡಿದೆ. ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಮನೆ ಗಣತಿ ಮಾಡಲಾಗುತ್ತದೆ. ಎರಡನೇ ಹಂತದಲ್ಲಿ ಜನ ಗಣತಿ ಫೆಬ್ರುವರಿ 2027ರವರೆಗೆ ನಡೆಯಲಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65